

ಪೊಲೀಸ್: ಹೇ... ಏನಯ್ಯ ನೀನು ಕ್ರೆಡಿಟ್ ಕಾರ್ಡ್ ಕಳೆದೋಗಿ ತಿಂಗಳಾದ ಮೇಲೆ ದೂರು ಕೊಡೋಕೆ ಬಂದಿದ್ದೀಯ?
ಗುಂಡ: ಸರ್ ಕಳ್ಳತನ ಮಾಡಿದವ ನನ್ನ ಹೆಂಡತಿಗಿಂತ ಕಡಿಮೆ ಕಾರ್ಡ್ ಬಳಸ್ತಾ ಇದ್ದ ಸರ್ ಅದ್ಕೆ.
ಪೊಲೀಸ್: ಮತ್ತೆ ಈಗ ಯಾಕೆ ದೂರು ಕೊಡೋಕೆ ಬಂದೆ?
ಗುಂಡ: ಸರ್ ಒಂದ್ ವಾರದಿಂದ ಈಚೆಗೆ ನನ್ನ ಹೆಂಡತಿ ಬಳಸುತ್ತಿದ್ದಕ್ಕಿಂತ ಹೆಚ್ಚಾಗಿ ಕಾರ್ಡ್ ಬಳಕೆ ಆಗ್ತಾ ಇದೆ ಸರ್. ಬಹುಶಃ ಕಳ್ಳನ ಹೆಂಡತಿ ಮತ್ತು ಅವನ ಮಗಳು ಆ ಕಾರ್ಡ್ ಬಳಕೆ ಮಾಡ್ತಾ ಇರಬೇಕು. ಅದ್ಕೆ ಬಂದೆ ಸರ್.

## ಕಸದವರು ಯಾರು?

ಮಗ: ಅಮ್ಮ ಸ್ವಚ್ಛ ಮಾಡುವವರು ಬಂದಿದಾರೆ. ಅವ್ರು ನಿನ್ನನ್ನ ಕರೀತಾ ಇದಾರೆ ಬಾರಮ್ಮ.
ಅಮ್ಮ: ನನ್ನನ್ನ ಯಾಕೋ ಕರೀತಾ ಇದಾರೆ?
ಮಗ: ಕಸ ಮಾಡೋರನ್ನ ಕರೆಯಿರಿ ಅಂತ ಹೇಳಿದ್ರು. ಮನೆ ಮತ್ತು ರಸ್ತೆಲಿ ಕಸ ಮಾಡೋದು ನೀನೆ ಅಲ್ವಾ. ಅದ್ಕೆ ನಿನ್ನ ಕರೆಯೋಕ್ ಬಂದೆ.

ಗುಂಡ: ಲೋ ತಿಮ್ಮ, ನಿನ್ನೆ ನನ್ನ ಅಜ್ಜಿ ಬಾವಿಗೆ ಬಿದ್ದು ತುಂಬಾ ಕೂಗ್ತಾ ಇದ್ರು ಕಣೋ.
ತಿಮ್ಮ: ಹೌದೇನೋ, ಈಗ ಹೇಗಿದ್ದಾರೆ?
ಗುಂಡ: ಈಗ ಬಹುಶಃ ಚೆನ್ನಾಗಿ ಇರಬೇಕು, ಬಾವಿಯಿಂದ ಯಾವುದೇ ಸದ್ದು ಬರ್ತಿಲ್ಲಾ.

## ಪತ್ರ ಸಿಗದಿದ್ದರೂ ಮದುವೆಗೆ ಬಾ

ಸರ್ದಾರ್: ಮದುವೆಗೆ ಬಾ ಅಂತ ಪತ್ರ ಬರೆದಿದ್ರೂ ಯಾಕೆ ಬರಲಿಲ್ಲ?
ಗುಂಡ: ನಿನ್ನ ಪತ್ರ ನನಗೆ ಸಿಗಲೇ ಇಲ್ಲ ಕಣೋ...
ಸರ್ದಾರ್: ಅಯ್ಯೋ ಪೆದ್ದ. ಪತ್ರ ಸಿಗದಿದ್ದರೂ ಪರವಾಗಿಲ್ಲ ಬಾ ಅಂತ ಬರೆದಿದ್ದೆ ಅಲ್ವೊ ಮಾರಾಯ!

ಗುರು: ಈಗಷ್ಟೇ ರಾಜಾ ಸತ್ಯ ಹರಿಶ್ಚಂದ್ರನ ಕಥೆ ಕೇಳಿದಿರಿ. ಈ ಕಥೆಯ ನೀತಿ ಏನು ಅಂತ ಹೇಳಿ ಮಕ್ಕಳೇ?
ಶಿಷ್ಯರು: ಸುಳ್ಳು ಹೇಳದಿದ್ರೆ. ಸುಡುಗಾಡೇ ಗತಿ! ಮತ್ತು ಕಷ್ಟ ಬಂದಾಗ ಹೆಂಡತಿ ಮಕ್ಕಳನ್ನು ಮಾರಬಹುದು.

ಮನೋಜ: ಸರ್ ನಮ್ ಹುಡುಗಿ ನಾಯಿ ಕೇಕ್ ಲವರ್. ನಾನೂ ಸಹ. ಅದ್ಕೆ ಒಂದೊಳ್ಳೆ ಕೇಕ್ ಕೊಡಿ.
ಬೇಕರಿ ಸಿಬ್ಬಂದಿ: ಇಲ್ಲೇ ತಿಂತೀರಾ ಅಥವಾ ಮನೆಗ್ ತಗೊಂಡ್ ಹೋಗ್ತೀರಾ!

ಮಗು: ಅಮ್ಮ ಪರೀಕ್ಷೆಗೆ ಎಲ್ಲ ತಯಾರಿ ಆಯಿತು ಒಂದು ತಯಾರಿ ಮಾತ್ರ ಬಾಕಿ ಇದೆ
ಅಮ್ಮ: ಯಾವ ತಯಾರಿ ?
ಮಗು : ಪರೀಕ್ಷೆಗೆ ಓದುವುದು.

(ಸಂಗ್ರಹ) ಅಮೂಲ್ಯ ಪಿ.ಎಲ್,
ತುಮಕೂರು

ಓಂ ✝ ☪ ಸರ್ವೇಜನಃ ಸುಖಿನೋ ಭವಂತು: ಓಂ ✝ ☪
ಸಮಸ್ಯೆ ನಿಮ್ಮದು ಪರಿಹಾರ ನಮ್ಮದು
ಶ್ರೀ ಸಾಯಿಬಾಬ ಉಪಾಸಕರು
ದಕ್ಷಿಣ ಭಾರತದಾದ್ಯಂತ ಜನಮನ್ನಣೆ ಪಡೆದಿರುವ ವಂಶಪಾರಂಪರಿಕ
ವಶೀಕರಣ ಮಾಂತ್ರಿಕರು
ಶ್ರೀಯುತ ಪರಶುರಾಮ್ ಗುರೂಜಿ
ಸ್ತ್ರೀ ಪುರುಷ ವಶೀಕರಣ, ಸತಿಪತಿ ಕಲಹ, ಡೈವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಪ್ರೇಮವಿಚಾರ, ಸಂತಾನಫಲ, ವ್ಯಾಪಾರಾಭಿವೃದ್ಧಿ, ಜಮೀನು ವಿಚಾರ, ಕೋರ್ಟ್‌ಕೇಸ್, ಮಾಟಮಂತ್ರ, ಪ್ರೇತಬಾಧೆ ಇನ್ನಿತರ ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ ಕೇರಳ ಮತ್ತು ಕೊಳ್ಳೇಗಾಲದ 16ನೇ ಶತಮಾನದ ಪ್ರಾಚೀನ ತಾಳೆಗ್ರಂಥದ ರಹಸ್ಯವಾದ ಮಹಾರುದ್ರಶೂಲ ಪ್ರಣವಶಕ್ತಿಯಿಂದ
ಕೇವಲ 5 ದಿನದಲ್ಲಿ 100% ಪರಿಹಾರ ಶತಸಿದ್ಧ
ನೀವು ಎಷ್ಟೋ ದೈವ, ದೇವಸ್ಥಾನ ಮತ್ತು ಜ್ಯೋತಿಷ್ಯರಲ್ಲಿ ಕೇಳಿ ಪರಿಹಾರ ಸಿಗದೆ ನೊಂದಿದ್ದರೆ ಶೀಘ್ರ ಪರಿಹಾರಕ್ಕಾಗಿ ಇವರನ್ನೊಮ್ಮೆ ಭೇಟಿಮಾಡಿ.
ಇಲ್ಲಿ ಹೇಳುವ ವಿಷಯವನ್ನು ಗುಪ್ತವಾಗಿಡಲಾಗುವುದು ಹಾಗೂ ಗುರೂಜಿಯವರಲ್ಲಿ ನಿಸ್ಸಂಕೋಚದಿಂದ ಮಾತನಾಡಲು ಕರೆಮಾಡಿ.
9620444460
ಖಾಯಂ ಮನೆ ವಿಳಾಸ: ಶ್ರೀಬಾಲಾಜಿ ಜ್ಯೋತಿಷ್ಯಂ
ಬನಶಂಕರಿ ದೇವಸ್ಥಾನದ ಹತ್ತಿರ, ಮುಖ್ಯಬಸ್‌ನಿಲ್ದಾಣದ ಪಕ್ಕದಲ್ಲಿ ಬನಶಂಕರಿ ಬೆಂಗಳೂರು.
ವಿಶೇಷ ಸೂಚನೆ: ಈ ಪೇಪರ್ ಕಟ್ಟಿಂಗ್ ತಂದವರಿಗೆ ಮುಜರಾಯಿ ಇಲಾಖೆ ಮತ್ತು ಧಾರ್ಮಿಕ ದತ್ತಿ ಇಲಾಖೆ ಹಾಗೂ ಮಾಡಾಯಿಕಾವ್ ಭಗವತಿ ದೇವಸ್ಥಾನಂ (ತಳಿಪರಂ) ಕೇರಳ ವತಿಯಿಂದ ಉಚಿತ ಸೇವೆಗಳು ಮತ್ತು ಪರಿಹಾರಗಳು ಲಭ್ಯವಿದೆ.